# ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 794/2023

ಸಿಡಬ್ಲ್ಯೂಃ 2 ಪಿಡಬ್ಲ್ಯೂಃ 3

| | |
|---|---|
| ಹೆಸರುಃ | ಭಾಸ್ಕರ ಮಾಬಲೇಶ್ವರ ಹೆಗಡೆ |
| ತಂದೆ/ಗಂಡನ ಹೆಸರುಃ | ಮಾಬಲೇಶ್ವರ ಹೆಗಡೆ |
| ವಯಸ್ಸುಃ | 60 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಗದ್ದೆಮನೆ ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 20-08-2025 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ದಿಃ 19-08-2023 ರಂದು ಆರೋಪಿ ಮತ್ತು ಚಾಸಾ-1ರವರ ನಡುವೆ ಗಲಾಟೆಗೆ ಸಂಬಂದಿಸಿದಂತೆ ಪೋಲೀಸರು ನಾನು ಮನೆಯಲ್ಲಿ ಇದ್ದಾಗ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ, ಯಾವುದೇ ಭಾವಚಿತ್ರ ತೆಗೆದಿರುವುದಿಲ್ಲ.

2. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 20-08-2023 ರ ಸ್ಥಳ ಪಂಚನಾಮೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-2 ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-2 (ಸಿ) ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಈ ಹಂತದಲ್ಲಿ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ-3 (ಸಿ) ಎಂದು ಗುರುತಿಸಲಾಯಿತು.

4. ಸಾಕ್ಷಿಗೆ ಈ ಹಂತದಲ್ಲಿ ನಾಲ್ಕು ಭಾವಚಿತ್ರಗಳನ್ನು ತೋರಿಸಿದ್ದು, ಸಾಕ್ಷಿ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-4 ರಿಂದ 7 ಎಂದು ಗುರುತಿಸಲಾಗಿರುತ್ತದೆ.

5. ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನ್ಯಾಯಾಲಯದ ಮುಂದೆ ಇರುವ ಒಂದು ಚತ್ರಿ, ಒಂದು ನಿಲಿ ಬಣ್ಣದ ಅಂಗಿ ಮತುತ ಒಂದು ನಿಲಿ ಬಣ್ಣದ ಬನಿಯನ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಈಗಾಗಲೇ ಮುಮಾ -1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ**

ದಿಃ 20-08-2023 ರಂದು ಮದ್ಯಾಹ್ನ 11-30 ರಿಂದ 12-30 ವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥ,ಳದಲ್ಲಿ ನಿ.ಪಿ-2 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಕಾಲಕ್ಕೆ ಪೋಲೀಸರು ನಿ.ಪಿ-3 ರಂತೆ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಕಾಲಕ್ಕೆ ಪೋಲೀಸರು ನಿ.ಪಿ-4 ರಿಂದ 7 ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಕಾಲಕ್ಕೆ ಪೋಲೀಸರು ನ್ಯಾಯಾಲಯದ ಮುಂದಿರುವ ಮು,ಮಾ-1 ರಿಂದ 3 ನ್ನು ನಮ್ಮ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ.**

ನಿ.ಪಿ-4 ರಿಂದ 7 ಭಾವಚಿತ್ರಗಳನ್ನು ನಮ್ಮ ಮನೆಯಿಂದ 50-100 ಮೀಟರ್ ಅಂತರದಲ್ಲಿ ತೆಗೆದಿರುತ್ತಾರೆ. ಪೋಲೀಸರು ನಿ.ಪಿ-2 ಪಂಚನಾಮೆಗೆ ಬರಲು ನನಗೆ ಯಾವುದೇ ನೋಟೀಸ ನೀಡಿಲ್ಲ. ನಿ.ಪಿ-2 ಕ್ಕೆ ಸಂಬಂದಿಸಿದಂತೆ ನಾನು ಪೋಲೀಸರಿಗೆ ಏನು ಹೇಳಲಿಲ್ಲ. ನಿ.ಪಿ-2 ಕ್ಕೆ ಸಂಬಂದಿಸಿದಂತೆ ಪೋಲೀಸರು ನಮ್ಮ ಊರಿಗೆ ಬಂದಾಗ ನಾನು ನನ್ನ ಮನೆಯಲ್ಲಿ ಇದ್ದೆನು. ದಿಃ 20-08-2023 ರಂದು ಪೋಲೀಸರು ಮದ್ಯಾಹ್ನ 11-30 ಕ್ಕೆ ನನ್ನನ್ನು ಕರೆದಿರುತ್ತಾರೆ. ಆ ದಿನ ಚಾಸಾ-1 ರವರು ನ್ಯಾಯಾಲಯದಿಂದ ಮುಂದೆ ಇರುವ ಮು.ಮಾ-1 ರಿಂದ 3 ನ್ನು ಪೋಲೀಸರಿಗೆ ನೀಡಿದ್ದನ್ನು ನಾನು ನಮ್ಮ ಮನೆಯಿಂದ 50 ಮೀ ದೂರದಿಂದ ನೋಡಿರುತ್ತೇನೆ. ಮು ಮಾ-1 ರಿಂದ 3 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಪೋಲೀಸರು ನಮ್ಮ ಮನೆಯ ಹತ್ತಿರ ಬಂದು ನಿ.ಪಿ-2 ಮತ್ತು 3 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ದಿಃ 19-08-2023 ರಂದು ಯಾರ ನಡುವೆ ಯಾವ ವಿಷಯಕ್ಕೆ ಗಲಾಟೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ.ಪಿ-2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನಿ.ಪಿ-4 ರಿಂದ 7 ಭಾವಚಿತ್ರ ಯಾವ ಜಾಗದಲ್ಲಿ ತೆಗೆದಿರುತ್ತಾರೆ ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ನಿ.ಪಿ-3 ಕಚ್ಚಾ



ನಕಾಶೆಯನ್ನು ಯಾರು ತಯಾರಿಸಿರುತ್ತಾರೆ ,ಯಾವ ಕಾರಣಕ್ಕೆ ತಯಾರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಚಾಸಾ-1 ರವರು ಯಾವ ಕಂಪನಿಯ ಚತ್ರಿಯನ್ನು ಪೋಲೀಸರಿಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ಚಾಸಾ-1 ರವರು ಪೋಲೀಸರಿಗೆ ನೀಡಿದರು ಎಂದು ಹೇಳಲಾದ ಚತ್ರಿ, ಒಂದು ನಿಲಿ ಬಣ್ಣದ ಅಂಗಿ, ಒಂದು ನಿಲಿ ಬಣ್ಣದ ಬನಿಯನ್ ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳು ಆಗಿರುತ್ತಾವೆಯೊ ಇಲ್ಲವೊ ಎಂದು ನನಗೆ ಈಗ

ಹೇಳಲು ಆಗುವುದಿಲ್ಲ. ಪೋಲೀಸರು ನಿ.ಪಿ–2 ಪಂಚನಾಮೆಯನ್ನು ಯಾವ ಯಾವ ಚೆಕ್ ಬಂದಿಗಳಿಗೆ ಒಳಪಟ್ಟು ಮಾಡಿರುತ್ತಾರೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಆ ದಿನ ಚಾಸಾ–1 ರವರು ಪೋಲೀಸರಿಗೆ ನೀಡಿದ ಛತ್ರಿ, ಒಂದು ನಿಲಿ ಬಣ್ಣದ ಅಂಗಿ, ಒಂದು ನಿಲಿ ಬಣ್ಣದ ಬನಿಯನ್ ನ್ನು ನಾನು ಪರೀಶಿಲಿಸಿ ನೋಡಿಲ್ಲ. ನಿ.ಪಿ–2 ಮತ್ತು 3 ರ ಕಾಲಕ್ಕೆ ಚಾಸಾ–3 ರವರು ಪಂಚನಾಮೆಗೆ ಸಂಬಂದಿಸಿದಂತೆ ನನ್ನ ಸಮಕ್ಷಮ ಯಾವುದೇ ಮಾಹಿತಿಯನ್ನು ಪೋಲೀಸರಿಗೆ ನೀಡಿಲ್ಲ. ನಿ.ಪಿ–2 ಮತ್ತು 3 ಕ್ಕೆ ಸಂಬಂದಿಸಿದಂತೆ ನಾನು ಸಹಿಮಾಡಿರುವುದನ್ನು ಬಿಟ್ಟು ಬೇರೇ ಎನನ್ನು ಗಮನಿಸಿರುವುದಿಲ್ಲ. ಆರೋಪಿ ಮತ್ತು ಚಾಸಾ–1 ರವರ ನಡುವೆ ಯಾವ ಕಾರಣಕ್ಕೆ ಗಲಾಟೆ ಆಗಿದೆ ಎಂದು ಗೊತ್ತಿಲ್ಲ. ಆ ದಿನ ಪೋಲೀಸರು ಯಾರು ಯಾರು ಬಂದಿದ್ದರು ಹಾಗೂ ಯಾವ ಹುದ್ದೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಆ ದಿನ ಪೋಲೀಸರು ಯಾವ ವಾಹನದಲ್ಲಿ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ–4 ಭಾವಚಿತ್ರದಲ್ಲಿ ಕಾಣುವ ಮನೆ ಆರೋಪಿಗೆ ಸೇರಿರುತ್ತದೆ. ನಿ.ಪಿ–4 ಪೊಟೊವನ್ನು ಆರೋಪಿಯ ಮನೆಯ ಕಾಂಪೌಂಡ್ ನ ಒಳಗೆ ತೆಗೆಯಲಾಗಿರುತ್ತದೆ ಎಂದರೆ ಸರಿ. ಚಾಸಾ–1 ರವರ ಮನೆಯ ಸುತ್ತಮುತ್ತಲು ಅರಣ್ಯ ಪ್ರದೇಶ ಇದೆ ಎಂದರೆ ಸರಿ. ಆರೋಪಿ ಮತ್ತು ಚಾಸಾ–1 ರವರ ಕುಟುಂಬದ ನಡುವೆ ಸಿವಿಲ್ ವ್ಯಾಜ್ಯ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ–2 ಮತ್ತು 3 ಕ್ಕೆ ಸಹಿ ಪಡೆಯಲು ಪೋಲೀಸರು ಮತ್ತು ಚಾಸಾ–1 ರವರು ನಮ್ಮ ಮನೆಯ ಬಳಿ ಬಂದಿದ್ದರು. ನಾನು ಸಾಮಾನ್ಯವಾಗಿ ದಿನ ದನ ಮೆಯಿಸಲು ಬೆಳಿಗ್ಗೆ 9–00 ಗೆ ಹೋಗಿ ಮದ್ಯಾಹ್ನ 11–30 ಸಮಯಕ್ಕೆ ಬರುತ್ತೆನೆ.

2. ನನ್ನ ಸಮಕ್ಷಮ ಚಾಸಾ–1 ರವರು ಪೋಲೀಸರಿಗೆ ಯಾವುದೇ ವಸ್ತುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ ಮತ್ತು ನಿ.ಪಿ–2 ರ ಸಮಯದಲ್ಲಿ ನಾನು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ–1 ರಿಂದ 3 ರೀತಿಯ ಛತ್ರಿ, ನೀಲಿ ಬಣ್ಣದ ಅಂಗಿ ಹಾಗೂ ನೀಲಿ ಬಣ್ಣದ ಬನಿಯನ್ ಸಾಮಾನ್ಯವಾಗಿ ಹಳ್ಳಿಗಳಲ್ಲಿ ರಸ್ತೆ ಬದಿಯಲ್ಲಿ ಸಿಗುತ್ತದೆ ಎಂದರೆ ಸರಿ.



ಸಿ.ಸಿ ನಂಃ 794/2023
ಸಿಡಬ್ಲ್ಯೂಃ 2 ಪಿಡಬ್ಲ್ಯೂಃ 3

**ಮರುವಿಚಾರಣೆಃ** ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**